ಸೃಜನಿ

**SRUJANI: Indian Journal of Innovative Research and Development (SIJIRD)**
Volume-2 Issue 2, May-June 2023, Pp. 68-73
Bi-Monthly, Peer-Reviewed, Open Access, Indexed Journal

**I S S N: 2583-3510**

**SIRDF**
**JOURNALS**
editor@srujani.in
www.srujani.in

# ಜನಪದ ಕಥೆಗಳಲ್ಲಿ ಸಾಮಾಜಿಕ ವ್ಯವಸ್ಥೆ

**ರಾಮಾಂಜಿನಿ ಕೆ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

**Abstract:**

*ಕರ್ನಾಟಕದ ಜಾನಪದ ಸಂಪತ್ತು ವಿಪುಲವಾಗಿರುವುದರ ಜೊತೆಗೆ ವೈವಿಧ್ಯಮಯವಾಗಿದೆ. ಜನಪದದಲ್ಲಿ ಹಲವಾರು ಪ್ರಕಾರಗಳಿದ್ದು ಮೊಗೆದಷ್ಟು ಮತ್ತೆ ಮತ್ತೆ ತುಂಬಿಕೊಳ್ಳುತ್ತದೆ. ಜನಪದ ಕತೆ ಇದ್ದಕ್ಕಿದ್ದಂತೆ ಒಂದು ಕ್ರಿಯೆಯಿಂದ ಪ್ರಾರಂಭವಾಗುವುದಿಲ್ಲ ಅಥವಾ ಏಕಾಏಕಿ ಮುಕ್ತಾಯವಾಗುವುದಿಲ್ಲ. ಉತ್ಸಾಹ ಕುತೂಹಲವನ್ನು ಕೆರಳಿಸಿಕೊಂಡು ಹೋಗಿ ಭಾವತೀವ್ರತೆಗೆ ಕೊಂಡೊಯ್ದು ನಿಧಾನವಾಗಿ ಅಂತ್ಯಗೊಳ್ಳುತ್ತದೆ. ಕಥೆಯಲ್ಲಿ ಬರುವ ವ್ಯಕ್ತಿಗಳ ನಡವಳಿಕೆ ಸ್ವಭಾವ ಕೊನೆಯ ಸಂದರ್ಭದಲ್ಲಿ ಬದಲಾವಣೆಯಾಗಬಹುದು ಇಲ್ಲವೆ ಹಾಗೆಯೇ ಮುಂದುವರೆದು ಕಥೆಗಳಲ್ಲಿ ಬರುವ ಪಾತ್ರಗಳ ಬದುಕು ದುರಂತವಾಗಿ ಕೊನೆಗೊಳ್ಳಬಹುದು. ಕಥೆಗಾರ ಹೇಳುವ ಕಥೆಗಳು ಪ್ರಾದೇಶಿಕ ದೃಷ್ಟಿಯಿಂದ ಮಹತ್ವವಾದವುಗಳು. ಆಯಾಯ ಪ್ರದೇಶದ ನಂಬಿಕೆಗಳು, ಸಾಂಸ್ಕೃತಿಕ ಅಂಶಗಳು, ಸಾಮಾಜಿಕ ವಿಚಾರಗಳು ಪ್ರಸ್ತಾಪವಾಗಿ ಪ್ರದೇಶದ ಸಾಮಾಜಿಕ ಸಾಂಸ್ಕೃತಿಕ ಅಧ್ಯಯನಕ್ಕೆ ವಿಪುಲವಾದ ಸಾಮಗ್ರಿಯನ್ನು ಒದಗಿಸುತ್ತವೆ.*

**Keywords:** *ಜನಪದ ಕಥೆ, ಜನಪದ ಸಾಹಿತ್ಯ, ಸಾಮಾಜಿಕ ವ್ಯವಸ್ಥೆ, ಜನಪದ ಸಂಸ್ಕೃತಿ.*

**ಪೀಠಿಕೆ**

ಸಂಸ್ಕೃತಿ ಅಧ್ಯಯನದಲ್ಲಿ ಜನಪದ ಕಥೆಗಳ ಪಾತ್ರ ಮಹತ್ವವಾದುದು. ಜಾನಪದ ವಿಷಯವನ್ನು ಒಂದು ಪರಂಪರೆಯ ವಸ್ತುವಾಗಿ ತೆಗೆದುಕೊಂಡರೆ, ಆಗ ಅದು ಅದರ ಸಾಹಿತ್ಯದ ಅಧ್ಯಯನಕ್ಕೆ ಅಧೀನವಾಗಿ ಪರಿಣಮಿಸುತ್ತದೆ. ಮಾನವಶಾಸ್ತ್ರಜ್ಞರು ಜಾನಪದದಲ್ಲಿನ ಸಾಮಾಜಿಕ ಆಶಯಗಳನ್ನು ವಿವರಿಸಲು ಉಪಯೋಗಿಸಿಕೊಳ್ಳಬಹುದು. ಜನಪದ ಕಥೆಯು ಜನರ ನಡುವೆ ಸೃಷ್ಟಿಯಾಗಿ ಮೌಖಿಕ ಪರಂಪರೆಯಲ್ಲಿ ಬದುಕುಳಿದಿದೆ. ಜನಪದ ಕಥೆಗಳಲ್ಲಿ ಗ್ರಾಮೀಣ ಜೀವನ ಮತ್ತು ಸಾಮಾಜಿಕ ವ್ಯವಸ್ಥೆ ಅಡಕವಾಗಿರುತ್ತದೆ. ಜನಪದರಿಗೆ ಪಾತ್ರಗಳ ಹೆಸರಿಗಿಂತ ಹುದ್ದೆ ದೊಡ್ಡದು ಎಂಬ ಕಲ್ಪನೆ ಇದ್ದುದು ಕಥೆಗಳಲ್ಲಿ ಕಾಣಿಸುತ್ತದೆ. ರಾಜ, ಸಾಹುಕಾರ, ಗೌಡ, ತಳವಾರ, ಕಂಬಾರ, ಕುಂಬಾರ, ಬಡಿಗ ಹೀಗೆ ಅವರ ಸ್ಥಾನ ಅಥವಾ ಉದ್ಯೋಗವನ್ನು ಕಥೆಗಳಲ್ಲಿ ಬಳಸುತ್ತಿದ್ದರು. ಉದಾಹರಣೆಗೆ *'ನೂರಾರು ವರ್ಷಗಳ ಹಿಂದೆ ಒಬ್ಬ ದೊಡ್ಡ ರಾಜ ಇದ್ದ. ಅವನಿಗೆ ಒಬ್ಬಳೇ ಮಗಳಿದ್ದಳು, ಆಕೆ ಹೆಸರು ರಾಜಕುಮಾರಿ ಅಂತ ಇತ್ತು'* ಎಂಬಂತಹ ನಿರೂಪಣೆಗಳನ್ನು ನೋಡಿದರೆ ಜನಪದರಿಗೂ ಸಾಹಿತ್ಯವನ್ನು ಸುಂದರವಾಗಿ ಹೇಳಬೇಕೆನಿಸಿದೆ ಎಂಬುದು ಸ್ಪಷ್ಟ ವಾಗುತ್ತದೆ. ಕಥೆಯ ಆವರಣವನ್ನು ಅರಸರ ಆಡಳಿತದ ಕಾಲದ್ದು ಎನಿಸುವಂತೆ ಅಲಂಕಾರಿಕವಾಗಿ ಹೇಳಿದ್ದರೂ ಅಲ್ಲೆಲ್ಲ ಬಹುಕಾಲದ ಹಿಂದಿನ ಮಾನವನ ಬದುಕಿನಿಂದ ಮೊದಲಾಗಿ, ಕಥೆ ನಿರೂಪಿತ

***Please cite this article as:*** ರಾಮಾಂಜಿನಿ ಕೆ. (2023). ಜನಪದ ಕಥೆಗಳಲ್ಲಿ ಸಾಮಾಜಿಕ ವ್ಯವಸ್ಥೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್.* 2(2), 68–73.

ವಾಗುತ್ತಿರುವ ಸಮಕಾಲೀನ ಸಂಗತಿಗಳೆಲ್ಲ ಕಥೆಗಳಲ್ಲಿ ನಿರೂಪಣೆಗೊಳ್ಳುತ್ತವೆ. 'ನೂರಾರು ವರ್ಷಗಳ ಹಿಂದೆ ಅಂದರೆ ಕಾಲ ಗೊತ್ತಾಗುವುದ್ದಿಲ್ಲ 'ಅವಳ ಹೆಸರು ರಾಜಕುಮಾರಿ' ಎಂದು ಹೇಳುವಲ್ಲಿ ಈ ಮಾತು ಇನ್ನಷ್ಟು ಗಟ್ಟಿಗೊಳ್ಳುತ್ತದೆ. ಹಳೆಯ ಕಾಲದ ಸಾಮಾಜಿಕ ವ್ಯವಸ್ಥೆ, ಆಡಳಿತ ವ್ಯವಸ್ಥೆ, ಆಚರಣೆಗಳು, ರೀತಿ ನೀತಿಗಳು ಅಲ್ಲದೆ ಅಲ್ಪಮಟ್ಟಿಗೆ ಆರ್ಥಿಕ ಸ್ಥಿತಿಗತಿಗಳನ್ನೂ ಕೂಡ ಜನಪದ ಕಥೆಗಳು ಒಳಗೊಂಡಿರುತ್ತವೆ.

**ಊರು**

ಜನಪದ ಕಥೆಗಳಲ್ಲಿ ಬರುವ ಊರುಗಳು ದೂರದಲ್ಲಿರುತ್ತವೆ ಹಾಗೂ ಊರುಗಳ ಹೊರವಲಯಗಳಲ್ಲಿ 'ಬಾರಂಭಾವಿ' ಇರುತ್ತವೆ. ಈ ಬಾವಿಗಳಲ್ಲಿ ಈಜಾಡಲು ಗಂಗಿ ಮಕ್ಕಳು, ನೆಲಗನ್ನೆಯರು ಬರುತ್ತಾರೆ ಎನ್ನುವ ನಂಬಿಕೆ ಜನಪದರದ್ದು. ಬಾವಿ ಇಲ್ಲದೆ ಇರುವ ಪ್ರದೇಶದಲ್ಲಿ ಹೊಳೆ, ಹಳ್ಳ, ನದಿಗಳಿರುತ್ತವೆ. ನೀರಿನ ಅನುಕೂಲ ಇಲ್ಲದೇ ಇದ್ದಾಗ ಊರಿನ ರಾಜನು ಬಾವಿಯನ್ನೂ ಕೆರೆಯನ್ನೂ ಕಟ್ಟಲು ಪ್ರಯತ್ನಿಸುತ್ತಾರೆ. ಕೆರೆ ನಿರ್ಮಾಣಕ್ಕೆ ಜ್ಯೋತಿಷ್ಯ ಕೇಳಿ ನೋಡುತ್ತಾರೆ ಅ ಸಂದರ್ಭದಲ್ಲಿ ತಮ್ಮ ಮಕ್ಕಳನ್ನು ಬಲಿಕೊಡುವ ಪ್ರಸಂಗ ಬಂದರೂ ಅವರು ಅದಕ್ಕಾಗಿ ಹಿಂದೆ ಮುಂದೆ ನೋಡುವುದಿಲ್ಲ ಮತ್ತು ಬಲಿ ಕೊಡಲು ಮುಂದಾಗುವರು.

ಕಾಡು ಪ್ರಾಣಿ, ಕಳ್ಳರು ಅಥವ ರಾಕ್ಷಸರ ಕಾಟದಿಂದ ತಪ್ಪಿಸಿಕೊಳ್ಳಲು ಪ್ರತಿ ಊರಲ್ಲಿ ಒಂದು 'ಅಗಸಿ' (ಊರ ಹೊರಬಾಗಿಲು) ಇರುತ್ತದೆ. ಹೊತ್ತು ಮುಳುಗಿದಾಗ ಅಗಸಿ ಬಾಗಿಲು ಹಾಕುವುದು ಮುಂಜಾನೆ ತೆಗೆಯುವುದು ಸಾಮಾನ್ಯ ರೂಢಿಯಾಗಿ ರುತ್ತದೆ. ಕಥೆಯೊಂದರಲ್ಲಿ ಬರುವಂತೆ 'ವ್ಯಕ್ತಿಯೊಬ್ಬ ಊರಿಗೆ ಬರಲು ರಾತ್ರಿಯಾದ್ದರಿಂದ ಅಗಸಿ ಬಾಗಿಲು ಮುಚ್ಚಿತ್ತು. ಹಾಗಾಗಿ ಅವನು ಅಲ್ಲಿಯೇ ಇದ್ದ ಹನುಮದೇವರ ಗುಡಿಯಲ್ಲಿ ಮಲಗುತ್ತಾನೆ. ಆ ಸಂದರ್ಭದಲ್ಲಿ ಊರೊಳಗೆ ಪ್ರವೇಶಿಸಲು ಬಂದ ಹುಲಿಯನ್ನು ಹೊಡೆಯುತ್ತಾನೆ. ಇದಕ್ಕೆ ಪ್ರತಿಯಾಗಿ ಬಹುಮಾನವಾಗಿ ರಾಜಕುಮಾರಿ ಯನ್ನು ಪಡೆಯುತಾನೆ. ಹೊಸದಾಗಿ ಊರಿಗೆ ಬರುವವರು ಅಗಸಿ ಬಾಗಿಲಿಗೆ ಕುದುರೆ ಕಟ್ಟಿ ಒಳಗೆ ಪ್ರವೇಶ ಮಾಡುತ್ತಿರುತ್ತಾರೆ. ಆಗಸಿಯ ಮುಂದೆಯೇ ಪಕ್ಕದಲ್ಲಿ ಹನುಮದೇವರ ಗುಡಿ ಇರುತ್ತದೆ. 'ಊರು ಸುಟ್ಟರೂ ಹನುಮದೇವರು ಹೊರಗೆ' ಎಂಬ ಗಾದೆಯು ಈ ಮಾತನ್ನು ಸಮರ್ಥಿಸುತ್ತದೆ. ರಾತ್ರಿಯಾಗಿ ಊರಿಗೆ ಬಂದವರು ಅಗಸಿ ಬಾಗಿಲು ಮುಚ್ಚಿದ್ದರೆ, ಹನುಮ ದೇವರ ಗುಡಿಯಲ್ಲಿಯೇ ತಂಗುತ್ತಾರೆ. ಬಿಕ್ಷುಕರು, ನಿರ್ಗತಿಕರು, ಸಾಧು, ಸನ್ಯಾಸಿಗಳು ಆಶ್ರಯ ಪಡೆಯು ವುದೂ ಈ ಹನುಮದೇವರ ಗುಡಿಯಲ್ಲಿಯೆ.

ಜನಪದ ಕಥೆಯಲ್ಲಿ ಬರುವ ಊರುಗಳು ಒಂದೊಂದು ವಿಶಿಷ್ಟವಾಗಿರುತ್ತವೆ. ಒಂದು ಕಡೆ ಸಂತೆ ನಡೆದರೆ ಮತ್ತೊಂದು ಊರಿನಲ್ಲಿ ಜಾತ್ರೆ ನಡೆಯುತ್ತದೆ ಆ ಜಾತ್ರೆಗೆ ರಾಜಕುಮಾರರೂ ಬರುತ್ತಾರೆ. ಕೇವಲ ಕಳ್ಳರಿಂದ ತುಂಬಿದ ಕಳ್ಳರ ಊರುಗಳು, ಎಲ್ಲ ವಸ್ತುಗಳೂ ಒಂದೇ ದರದಲ್ಲಿ ಮಾರಲಾಗುವ ಅಪರೂಪದ ಊರು ಸಹ ಕಾಣಸಿಗುತ್ತದೆ. ಯಾವುದಾದರೂ ಊರಿಗೆ ಅಪಾಯ ಎದುರಾದರೆ ಹೊಸ ಊರನ್ನು ನಿರ್ಮಿಸಿಕೊಂಡು ಬೇರೆ ಕಡೆ ಹೋಗುವುದು ಜನಪದ ಕಥೆಯಲ್ಲಿ ಸಿಗುತ್ತವೆ. ಊರಿಗೊಬ್ಬ ರಾಜ ಇಲ್ಲವೆ ಗೌಡನಿರುತ್ತಾನೆ. ಅವನು ಆಡಳಿತದ ಚುಕ್ಕಾಣಿಯಿಡಿದಿರುತ್ತಾನೆ. ಪ್ರತಿಯೊಂದು ಊರಿಗೂ ಆಡಳಿತಗಾರನ ಸಹಾಯಕರಾಗಿ ಮಂತ್ರಿ, ಪ್ರಧಾನಿ, ವಾಲಿಕಾರ, ತಳವಾರ ಇರುತ್ತಾರೆ. ಹಾಗೆಯೇ ಒಕ್ಕಲುತನಕ್ಕೆ ಪೂರಕವಾದ ವೃತ್ತಿಗಳನ್ನು ಹೊಂದಿದ ಆಯಗಾರರು ಹಾಗೂ ಇತರ ಕೆಲವು ಜಾತಿಯ ವೃತ್ತಿಕಾರರೂ ಪ್ರತಿಯೊಂದು ಊರಿನಲ್ಲಿ ಅವಶ್ಯವಾಗಿ ನೆಲೆಸಿರುತ್ತಾರೆ ಈ ಅಂಶಗಳು ಜಾನಪದ ಕಥೆಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ.

**ಕುಟುಂಬ–ಮನೆ**

ರಾಜನು ತನ್ನ ಅಳಿಯ ಮತ್ತು ಮಗಳಿಗೆ ಊರಹೊರಗೆ ಮಹಡಿ ಮನೆಯನ್ನು ಕಟ್ಟಿಸಿ

ಕೊಡುತ್ತಾನೆ. ಅಳಿಯ ತನ್ನ ಮಾವನ ಮನೆಯಲ್ಲಿಯೇ ವಾಸಿಸುತ್ತಾನೆ. ಈ ಅಂಶವನ್ನು ಗಮನಿಸಿದರೆ 'ಮಾತೃಪ್ರಧಾನ' ಕುಟುಂಬ ವ್ಯವಸ್ಥೆ ಅಸ್ಥಿತ್ವದಲ್ಲಿತ್ತು ಎಂಬುದನ್ನು ಮನಗಾಣಬಹುದಾಗಿದೆ. ಬಡವರು ಗುಡಿಸಲುಗಳಲ್ಲಿ ವಾಸ ಮಾಡಿದರೆ ಅರಸರು ಏಳು ಉಪ್ಪರಿಗೆಯ ಮನೆಯಲ್ಲಿ ವಾಸಮಾಡುವುದು ಬಡವ–ಶ್ರೀಮಂತರ ನಡುವಿನ ಅಂತರವನ್ನು ತೋರಿಸುತ್ತದೆ. ಇದೇ ರೀತಿ ತಂದೆಯ ನಂತರ ಮಕ್ಕಳು ಆಸ್ತಿಯನ್ನು ಭಾಗ/ಹಂಚಿಕೆ ಮಾಡಿಕೊಳ್ಳುವ ಬಗೆ, ತಂದೆಯ ಆಸ್ತಿಯನ್ನು ತಮ್ಮಂದಿರಿಗೆ ಬಿಟ್ಟು ತಾನೆ ಬೇರೆ ಹೋಗುವ ಹಿರಿಯರು, ಕಿರಿಯರಿಗೆ ಆಸ್ತಿಯಲ್ಲಿ ಯಾವ ಪಾಲು ಕೊಡದೆ ಹೊರ ಹಾಕುವ ಹಿರಿಯರು ಹೀಗೆ ಅನೇಕ ವೈರುದ್ಯಗಳು ಜನಪದ ಕಥೆಗಳಲ್ಲಿ ವ್ಯಕ್ತವಾಗಿರುವುದು ಆಯಾಯ ಕಾಲಘಟ್ಟದ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತವೆ.

**ಆಹಾರ**

ಆಹಾರಕ್ಕೆ ಸಂಬಂಧಪಟ್ಟಂತೆ ಜನಪದ ಕಥೆಗಳಲ್ಲಿ ಸುಮಾರು ನಾಲ್ಕು ಹಂತದ ನಾಗರಿಕತೆಯ ಅಂಶಗಳು ಕಂಡು ಬರುತ್ತವೆ. ಒಂದು– ಮಾನವನು ನರಭಕ್ಷಕನಾಗಿದ್ದ ಕಾಲದ ಪಳೆಯುಳಿಕೆಯಾಗಿ, ಒಂದು ಕಡೆ ರಾಣಿಯರು ಅಡವಿಯಲ್ಲಿ ತಾವು ಜನ್ಮವಿತ್ತ ಮಕ್ಕಳನ್ನು ತಿನ್ನುವ ಉದಾಹರಣೆ ದೊರೆಯುತ್ತದೆ. ಎರಡು– ಬೇಟೆ ಕಾಲದ ಮುಖ್ಯ ಆಹಾರವೆಂದರೆ ಪ್ರಾಣಿಗಳ ಮಾಂಸವನ್ನು ಆಹಾರಕ್ಕಾಗಿ ಬಳಸುವುದು, ಮತ್ತು ಮಾರುವುದು ಬೇಟೆ ಸಂಸ್ಕೃತಿಯಿಂದ ನಾಗರಿಕತೆಯೆಡೆಗೆ ಸಾಗುವುದು, ಬೇಟೆಯಾಡಲು ನಾಯಿಗಳನ್ನು ಬಳಸುತ್ತಿದ್ದರು ಎಂಬ ಅಂಶಗಳು ಕಥೆಗಳಲ್ಲಿ ಕಂಡುಬರುತ್ತವೆ.

ಮತ್ತೊಂದು ಕಥೆಯಲ್ಲಿ ಅಡವಿಯಲ್ಲಿ ವಾಸವಿದ್ದ ತಾಯಿ ಮತ್ತು ಮಗ ಪ್ರತಿದಿನ ಬೇಟೆಯಾಡಿ ತಂದ ಪ್ರಾಣಿಗಳ ಮಾಂಸವನ್ನು ಬೇಯಿಸಿ ತಿನ್ನುತ್ತಿದ್ದರು ಎಂಬ ಅಂಶ ಮನಾವನ ನಾಗರಿಕತೆಯ ಬೆಳವಣಿಗೆಯ ಹಂತವನ್ನು ತೋರಿಸುತ್ತದೆ. ಬೇಟೆಯಾಡಿ ಹಸಿ ಮಾಂಸವನ್ನೇ ತಿನ್ನುತ್ತಿದ್ದ ಮನುಷ್ಯನು ಅದು ಸುಟ್ಟರೆ ಇನ್ನಷ್ಟು ರುಚಿಯಾಗುತ್ತದೆ ಎಂಬುದನ್ನು ಕಂಡುಕೊಂಡ ನಂತರ ಅದನ್ನು ಬೇಯಿಸಿ ತಿನ್ನಲು ಪ್ರಾರಂಭಿಸುತ್ತಾನೆ. ಮೂರನೆಯದಾಗಿ–ಬೇಟೆ ಕಾಲದಲ್ಲಿ ಮಾಂಸವನ್ನು ಆಹಾರವಾಗಿಸಿಕೊಂಡಿದ್ದ ಮಾನವನು ಜೊತೆಗೆ ಗಡ್ಡೆ–ಗೆಣಸು, ಹಣ್ಣು ಹಂಪಲು, ಇತ್ಯಾದಿಗಳನ್ನು ತಿನ್ನಲು ಪ್ರಾರಂಭಿಸಿದನೆಂದು ತಿಳಿಯುತ್ತದೆ. ಅಡವಿಯಲ್ಲಿ ಜನಿಸಿದ ನಾಯಕನೊಬ್ಬನು ಬಿಲ್ಲು ವಿದ್ಯೆಯಲ್ಲಿ ಪ್ರವೀಣನು ಆದರೆ ಬೇಟೆಯಾಡಲು ಹೋದವನು ಗೆಡ್ಡೆ ಗೆಣಸು ತರುತ್ತಿದ್ದನು ಎಂದು ವಿವರಣೆ ಬರುತ್ತದೆ ಮತ್ತೊಂದು ಕಡೆ ರಾಜಕುಮಾರಿಯನ್ನು ಅಪಹರಿಸಿಕೊಂಡೊಯ್ದ ಆನೆಯೊಂದು ಅಡವಿಯಲ್ಲಿ ಆಕೆಗೆ ತಿನ್ನಲು ಹಣ್ಣು ಹಂಪಲು ತಂದು ಕೊಡುತ್ತಿತ್ತು ಇನ್ನೊಂದು ಕಡೆ ತನ್ನಲ್ಲಿ ಮಂತ್ರ ವಿದ್ಯೆ ಕಲಿಯಲು ಉಳಿದ ಹುಡುಗರಿಗೆ ಮಾಟಗಾರ ತಿನ್ನಲು ಹಣ್ಣು ಹಂಪಲು ಕೊಡುವ ಪ್ರಸ್ತಾಪವನ್ನು ಜನಪದ ಕಥೆಯಲ್ಲಿ ಕಾಣಬಹುದಾಗಿದೆ. ನಾಲ್ಕನೆಯದಾಗಿ–ಮಾನವ ವ್ಯವಸಾಯ ಮಾಡುವುದನ್ನು ಕಲಿತು ಆಹಾರೋತ್ಪಾದನೆ ಮಾಡಿಕೊಳ್ಳುವುದು ಹೀಗೆ ಜನಪದ ಕಥೆಗಳ ವಿವರಗಳನ್ನು ಸೂಕ್ಷ್ಮವಾಗಿ ನೋಡಿದರೆ, ಜನಪದ ಕಥೆಗಳು ಮಾನವನ ಬೆಳವಣಿಗೆಯ ಪ್ರಮುಖವಾದ ನಾಲ್ಕು ಹಂತಗಳ: ಆದಿ, ಕಾಡು, ಬೇಟೆ ಮತ್ತು ನವನಾಗರಿಕತೆಗಳ ಬದುಕಿನ ಚಾರಿತ್ರಿಕ ಅಂಶಗಳನ್ನು ಉಳಿಸಿಕೊಂಡು ಬಂದಂತೆ ತೋರುತ್ತದೆ.

**ರಾಜ್ಯಾಡಳಿತ ವ್ಯವಸ್ಥೆ**

ಜನಪದ ಕಥೆಗಳಲ್ಲಿ ರಾಜರಾಣಿಯರ ಕಥೆಗಳು ಸಾಕಷ್ಟು ದೊರೆಯುತ್ತವೆ. ಇದರಿಂದ ಮೂಲ ರಾಜ್ಯದ ಕಲ್ಪನೆ ಏನೆಂಬುದು ಸ್ಪಷ್ಟವಾಗಿ ಗೊತ್ತಾಗದಿದ್ದರೂ ಊಹಿಸಿಕೊಳ್ಳಲು ಸಹಾಯವಾಗುತ್ತದೆ. 'ಒಂದೂರಿಗೆ ಒಬ್ಬ ರಾಜ' ಇರುವಂತೆ ವಿವರಿಸಲಾಗುತ್ತದೆ. ಇದನ್ನು ಗಮನಿಸಿದರೆ ಊರಿಗೊಬ್ಬ ಬಲಶಾಲಿ ಇದ್ದು, ತನ್ನ ಗುಂಪಿಗೆ ತಾನೇ ರಾಜನಂತೆ ವರ್ತಿಸುವ ನಾಯಕರ ಚಿತ್ರಣದಂತೆ ಕಾಣುತ್ತದೆ. ಇದು ಅರಸೊತ್ತಿಗೆ ಪ್ರಾರಂಭವಾಗುವುದಕ್ಕಿಂತ ಬಹಳ ಮುಂಚಿನ

ವ್ಯವಸ್ಥೆಯಂತೆ ಕಂಡುಬರುತ್ತದೆ. ಕೆಲವು ಕಡೆ ಬಹುಮಾನವಾಗಿ 'ಅರ್ಧ ರಾಜ್ಯವನ್ನು ಕೊಡುವ ವಿವರಣೆಗಳೂ ಬರುತ್ತವೆ. ಇಲ್ಲಿ ಕೆಲವು ಊರುಗಳು ಸೇರಿ ಒಂದೇ ಆಡಳಿತಕ್ಕೊಳಪಟ್ಟ ಕಲ್ಪನೆ ದೊರೆಯುತ್ತದೆ. ಒಂದೊಂದು ಕಡೆ 'ರಾಜ' ಎನ್ನುವ ಬದಲಾಗಿ ಊರ ಸಾಹುಕಾರ ಎಂಬ ವಿವರಣೆ ಇರುವ ಕತೆಗಳು ದೊರೆಯುತ್ತವೆ. ಊರಿಗೊಬ್ಬ ರಾಜನಿರುವ ವ್ಯವಸ್ಥೆ ಹಿಂದೆ ಸರಿದು, ಸಾವಕಾಶವಾಗಿ ಅರಸೊತ್ತಿಗೆಯ ವ್ಯಾಪ್ತಿ ವಿಸ್ತಾರವಾಗುತ್ತ ಬಂದಂತೆ ಹಳ್ಳಿಯ ಆಡಳಿತ ವ್ಯವಸ್ಥೆ ಕ್ರಮವಾಗಿ ಬದಲಾದಂತೆ ತೋರುತ್ತದೆ. ಹೀಗೆ ಒಂದು ಅರಸೊತ್ತಿಗೆಯ ವ್ಯಾಪ್ತಿ ವಿಸ್ತಾರವಾದಂತೆ ಮೊದಲು ಊರಿಗೆ ಅರಸರಾಗಿದ್ದವರು ಮುಂದೆ ಮಾಂಡಲಿಕ–ಸಂಸ್ಥಾನಿಕ ರಾಗುಳಿದರು. ಅಂಥವರ ಪಳೆಯುಳಿಕೆಯೇ ಶ್ರೀಮಂತರ ಕಲ್ಪನೆಯಾಗಿರಬೇಕು. ಹೀಗಾಗಿ ಸಾಹುಕಾರರ ಪ್ರವೇಶವಿರುವ ಕಥೆಗಳು ನಂತರದ ಬೆಳವಣಿಗೆಯ ಗುರುತುಗಳಾಗಿದ್ದು, ರಾಜರ ಬದಲಿಗೆ ಸಾಹುಕಾರರ ಪಾತ್ರಗಳು ಉಳಿದಿರುವಂತಿವೆ. ಕಾಲಕಳೆದಂತೆ ರಾಜನ ಆಸ್ಥಾನದಲ್ಲಿ ಮಾಂಡಲಿಕನೂ ನಂತರ ಸಾಹುಕಾರ ಗೌಡನೂ ಆಕ್ರಮಿಸಿಕೊಂಡಂತೆ ತೋರುತ್ತದೆ. ಜನಪದರಿಗೆ ಸಾಹುಕಾರನ ಕಡೆಗೆ ಹೆಚ್ಚಿನ ಗಮನವಿದೆ. ಸಾಹುಕಾರನ ಜೀವನದ ಬಗ್ಗೆ ಜನಪದರಿಗೆ ಅಸೂಯೆಯಿಲ್ಲ. ಆದರೆ ಅವನ ಧನದ ಮದ, ಗರ್ವ, ದುರ್ನಡತೆಗಳಿಂದ ಅವರು ಬೇಸತ್ತಿರುತ್ತಾರೆ. ಅದಕ್ಕಾಗಿ ಅವನ ಗರ್ವ ಮುರಿಯಲು ಸಾಹುಕಾರನ ಮಗಳನ್ನು ಊರಿನ ಅತಿ ಕಡುಬಡವ ಹಾರಿಸಿಕೊಂಡು ಹೋಗುವಂತೆ ಮಾಡುತ್ತಾರೆ. ಮುಂದೆ ಅವನೇ ಊರಿಗೆ ಅರಸ, ಸಾಹುಕಾರ, ಬಡವರ ಕರುಣಿ, ದಾನಿ ಏನೆಲ್ಲ ಆಗುವನೆಂದು ಕಥೆಗಳು ವರ್ಣಿಸುತ್ತವೆ.

**ರಾಜರುಗಳು**

ಕಥೆಗಾರ ರಾಜನನ್ನು ರಾಜನೆಂದು ಹೇಳಿದರೂ ಆತನ ಅನುಭವಕ್ಕೆ ನಿಲುಕುವ ವ್ಯಕ್ತಿ ಸಾಮಾನ್ಯ ಕುಟುಂಬದ ವ್ಯಕ್ತಿಯೆ, ಹೀಗಾಗಿ ರಾಜರುಗಳ ಆಡಳಿತ ವೈಖರಿಯ ಬಗ್ಗೆ ಹೆಚ್ಚಿಗೇನೂ ತಿಳಿದು ಬರುವುದಿಲ್ಲ. ಇಲ್ಲಿ ಆಡಳಿತದ ಬಗ್ಗೆ ವಿಶೇಷವಾಗಿ ತಿಳಿಯದ ಜನಪದರಿಂದ ಆ ಅಂಶಗಳು ದೂರವಾಗಿ ಹೋಗಿವೆಯೆಂದು ಹೇಳಬಹುದೇನೊ. ಬಹಳವೆಂದರೆ, ರಾಜರು ಊರಿನ ಕಂಟಕವನ್ನು ಹೋಗಲಾಡಿಸಲೆಂದು ಸಾಹಸದ ಕೆಲಸಗಾರರನ್ನು ಹುಡುಕಲು–ಡಂಗೂರ ಹೊಡಿಸುವ, ತಪ್ಪು ಮಾಡಿದವರನ್ನು ಶಿಕ್ಷೆಗೆ ಗುರಿಪಡಿಸುವ, ಗಸ್ತು ತಿರುಗಿಸುವ ಈ ಮುಂತಾದ ವಿಷಯಗಳು ಮಾತ್ರ ದೊರೆಯುತ್ತವೆ. ಮಕ್ಕಳಿಲ್ಲದ ಅರಸರು ಮಕ್ಕಳಿಗಾಗಿ ಕೊರಗುವುದು, ಮಕ್ಕಳಿದ್ದವರು ಮಕ್ಕಳು ವಯಸ್ಸಿಗೆ ಬಂದಾಗ ಮದುವೆ ಮಾಡುವುದು ಮುಂತಾದವು ಜನಪದ ಕಥೆಗಳಲ್ಲಿ ಅಡಕವಾಗಿವೆ.

**ನ್ಯಾಯವಾದಿ ಅರಸರು**

ತನ್ನ ಪ್ರಜೆಗಳಿಗೆ ಅನ್ಯಾಯವಾಗದಂತೆ ನೋಡಿ ಕೊಳ್ಳುವ ರಾಜನ ಮನಸ್ಸು ಯಾವಾಗಲು ಅವರ ಹಿತಚಿಂತನೆ ಮಾಡುತ್ತಿರುತ್ತದೆ ಎನ್ನುವುದನ್ನು ಕಥೆಯಲ್ಲಿ ಗಮನಿಸಬಹುದು, ಪ್ರಜೆಗಳು ತನ್ನ ಆಡಳಿತದ ಬಗ್ಗೆ ಏನೆಂದುಕೊಳ್ಳುತ್ತಾರೆ ಎಂಬುದನ್ನು ತಿಳಿಯಲು ಅರಸನು ಮಾರುವೇಷದಲ್ಲಿ ಊರೂರು ಸುತ್ತುವ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಪ್ರಜೆಗಳಿಗೆ ನ್ಯಾಯ ದೊರಕಿಸಿಕೊಡಲು ಯಾವಾಗಲೂ ಯೋಚಿಸುತ್ತಿದ್ದರು. ಇದು ಅವರ ಕರ್ತವ್ಯನಿಷ್ಠ ಮಾನವೀಯ ಭಾವನೆಗಳ ಜೊತೆಗೆ, ಶಿಕ್ಷೆಗೆ ಗುರಿಪಡಿಸುವ ನಿಷ್ಠುರತೆಗಳ ಪರಿಚಯವೂ ಜನಪದ ಕಥೆಗಳಲ್ಲಿ ನಮಗಾಗುತ್ತದೆ. ರಾಜನೊಬ್ಬನು ಪ್ರಜೆಗಳು ನ್ಯಾಯ ಬೇಡಲು ಅನುಕೂಲವಾಗುವಂತೆ ಗಂಟೆಯೊಂದನ್ನು ಕಟ್ಟಿದ್ದನು ಅನ್ಯಾಯಕ್ಕೊಳಗಾದ ವ್ಯಕ್ತಿ ಬಂದು ಗಂಟೆಬಾರಿಸಿ, ನ್ಯಾಯ ಬೇಡಬಹುದಾಗಿತ್ತು. ಒಟ್ಟಿನಲ್ಲಿ ಅರಸರು ಪ್ರಜೆಗಳಿಗಾಗುವ ತೊಂದರೆಗಳನ್ನು ಸಹಿಸುತ್ತಿರಲಿಲ್ಲ. ಒಂದು ಕಡೆ ಸಂತೆಯಲ್ಲಿ ಬೂದಿ ತೂರುತ್ತಿದ್ದವರನ್ನು ಸೇವಕರು ಹಿಡಿದು ತರಲು ಅವರನ್ನು ಅರಸನು ಸೆರೆಮನೆಗೆ ಹಾಕುತ್ತಾನೆ.

ಒಂದು ಕಥೆಯಲ್ಲಿ – ಮುದುಕನೊಬ್ಬನು ಮಾವಿನ ಮರ ನೆಡುವಾಗ ಬಂದ ರಾಜನು, ಇದರ ಹಣ್ಣು ನೀನು ತಿನ್ನಲಾರೆ, ಇದನ್ನೇಕೆ ನೆಡುವೆ? ಎಂದು ಕೇಳುತ್ತಾನೆ. ನಾನಿಲ್ಲದಿದ್ದರೂ ನನ್ನ ಮಕ್ಕಳಾದರೂ ತಿನ್ನುತ್ತಾರೆಂದು ಮುದುಕನು ಹೇಳುತ್ತಾನೆ, ಮುಂದೆ ಮುದುಕನು ಆ ಮರ ಹಣ್ಣುಗಳನ್ನು ಬಿಡುವವರೆಗೂ ಬದುಕಿದ್ದು, ರಾಜನಿಗೆ ತಾನು ನೆಟ್ಟ ಮರದ ಹಣ್ಣುಗಳನ್ನು ಒಯ್ದು ಕೊಡುತ್ತಾನೆ. ಅರಸ ಸಂತೋಷದಿಂದ ಅವನಿಗೆ ಬಹುಮಾನ ಕೊಡುತ್ತಾನೆ. ಇವನಂತೆ ತಾನೂ ಅರಸನಿಂದ ಬಹುಮಾನ ಪಡೆಯುವ ಆಸೆಯಿಂದ ಇನ್ನೊಬ್ಬನು ಹಣ್ಣಿನೊಂದಿಗೆ ಬರಲು, ರಾಜನು ಅವನನ್ನು ಬಡಿದು ಕಳಿಸುತ್ತಾನೆ.

ಮಾನವೀಯ ತೀರ್ಪುಗಳನ್ನು ಕೊಡುವ ರಾಜನು, ಒಮ್ಮೊಮ್ಮೆ ಅಸಹಾಯಕನಾಗಿ ಅನೇಕ ತರಹದ ಚಿತ್ರಹಿಂಸೆಗಳನ್ನು ಕೊಡಬಲ್ಲನು. ತನ್ನ ಮನರಂಜನೆಗೆ ಹೋರಿ ಕಾಳಗ ಹಚ್ಚಿ, ಸೋತ ಹೋರಿಗೆ ಊರು ಬಿಟ್ಟು ಹೊರಹೊಡೆಸುತ್ತಾನೆ, ಮತ್ತೊಂದು ಕಡೆ ಕನ್ನ ಹಾಕಲು ಹೋಗಿ ಗೋಡೆ ಬಿದ್ದರೆ, ಕಳ್ಳರ ಬದಲಾಗಿ ಗೋಡೆ ಬೀಳಲು ಕಾರಣವೆಂದು ಕಂಡುಬಂದ ಹಲವರಿಗೆ ಅಪರಾಧಿಯೆಂದು ಶಿಕ್ಷಿಸುತ್ತಾನೆ. ಕಡೆಗೆ ನೇಣಿಗೆ ತಕ್ಕ ನಿರಪರಾಧಿಯನ್ನು ಹಿಡಿದು ತರಿಸುತ್ತಾನೆ. ನಂತರ ಗಲ್ಲಿಗೇರಿಸಿಕೊಂಡವರು ಸ್ವರ್ಗದಲ್ಲಿ ರಾಜರಾಗುವರೆಂದು ಬಗೆದು ತಾನೇ ಗಲ್ಲಿಗೇರಿಸಿಕೊಂಡು ಸಾಯುತ್ತಾನೆ.

**ರಾಣಿಯರು**

ಜನಪದ ಕಥೆಗಳಲ್ಲಿ ರಾಣಿಯರ ವ್ಯಕ್ತಿಚಿತ್ರಗಳನ್ನು ಅವಲೋಕಿಸಿದರೆ ಒಬ್ಬ ಸಾಮಾನ್ಯ ಹೆಣ್ಣಿನ ದೌರ್ಬಲ್ಯಗಳು, ಆಸೆ–ಅಕಾಂಕ್ಷೆಗಳು, ಬಯಕೆಗಳು ರಾಣಿಯರಲ್ಲೂ ಕಾಣುತ್ತೆವೆ, ಗಂಡನೊಂದಿಗೆ ಸಹಕರಿಸುವ ಹೆಂಡತಿಯರಾಗಿ, ಪರಪುರುಷನೊಂದಿಗೆ ಕೂಡಿ ಕಾಮದ ಚಪಲವುಳ್ಳವರಾಗಿಯೂ ಸಹ ತೋರುತ್ತಾರೆ. ಯಾವ ರೀತಿಯಿಂದ ನೋಡಿದರೂ ರಾಣಿಯರೂ ಸಾಮಾನ್ಯ ಹೆಂಗಸಿಗಿಂತ ಭಿನ್ನವಾಗೇನೂ ತೋರುವುದಿಲ್ಲ. ರಾಜನ ಆಡಳಿತದಲ್ಲಿ ಆಕೆ ನೇರವಾದ ಬಗೆಗಳಾಗಲಿ, ಆಕೆಗ ಪ್ರತ್ಯೇಕವಾದ ಯಾವುದೇ ಅಧಿಕಾರಗಳೇನಾದರೂ ಇದ್ದವೆಂದಾಗಲಿ ಜನಪದ ಕಥೆಗಳಿಂದ ತಿಳಿದು ಬರುವುದಿಲ್ಲ ಜನಪದ ಕಥೆಗಳಲ್ಲಿ ಬಂಜೆತನದಿಂದ ಕೊರಗುವವರು ಕೇವಲ ಹೆಣ್ಣು ಮಕ್ಕಳೇ ಅಲ್ಲ ಗಂಡು ಮಕ್ಕಳು ಕೂಡ ಆ ಚಿಂತೆಯಿಂದ ಕೊರಗುವರೆಂಬುದನ್ನು ರಾಜರುಗಳ ಬಗ್ಗೆ ಬರೆಯುವಾಗ ಈ ಹಿಂದೆಯೇ ಹೇಳಲಾಗಿದೆ, ರಾಜರ ಜೊತೆಗೆ ರಾಣಿಯರೂ ಬಂಜೆ ಎಂಬ ಅಪವಾದದಿಂದ ಪಾರಾಗಲು ತವಕಿಸುತ್ತಿರುತ್ತಾರೆ. ಸಂತತಿ ಇಲ್ಲದ ರಾಣಿ ನನಗೆ ಒಂದಾದರೂ ಸಂತತಿ ಆಗಬಾರದೆ ಎಂದು ಹಂಬಲಿಸುತ್ತಾಳೆ. ರಾಣಿಯರು ರಾಜರ ಹೆಂಡತಿಯರಾಗಿ ಗಂಡನ ಸಮಸಮವಾಗಿ ಸಂಸಾರ ನಡೆಸುವವರೂ ಎಂತಹ ತೊಂದರೆ ಬಂದರೂ ಅವನಿಗೆ ಸಂಪೂರ್ಣ ನಿಷ್ಠೆಯಿಂದಿರು ವುದನ್ನು ಕಥೆಯಲ್ಲಿ ಕಾಣುತ್ತೇವೆ. ಒಬ್ಬ ರಾಣಿಯನ್ನು ಮತ್ತೊಬ್ಬನು ಅಪಹರಿಸಿದಾಗ, ಅವನಿಗೆ ವ್ರತಗಳನ್ನೊಡ್ಡಿ, ತನ್ನ ಗಂಡನ ದಾರಿ ಕಾಯುತ್ತಾಳೆ. ಇನ್ನೊಬ್ಬಾಕೆ ತನ್ನೂರಿಗೆ ನೀರಿಲ್ಲದಿರುವಾಗ, ಜ್ಯೋತಿಷಿ ಹೇಳಿದಂತೆ ತನ್ನ ಮಗ ಸೊಸೆಯರನ್ನು ರಾಜನು ಬಾವಿಗೆ ಬಲಿಕೊಡಲು ಮನಸ್ಸು ಮಾಡಿದಾಗ ರಾಜನ ವಿಚಾರವನ್ನು ರಾಣಿಯು ಸಮ್ಮತಿಸುತ್ತಾಳೆ ಮತ್ತೊಬ್ಬ ರಾಜನು ರಾಜ್ಯವನ್ನು ತ್ಯಜಿಸಿ ಅಡವಿಗೆ ನಡೆದಾಗ ಅವನನ್ನು ಹಿಂಬಾಲಿಸುತ್ತಾಳೆ. ರಾಜರ ಉಂಬತನದಿಂದಾಗಿ ಅನೇಕ ರಾಣಿಯರು ಅಡವಿಪಾಲಾಗುವ ದೃಶ್ಯಗಳಂತೂ ಬಹು ಸಾಮಾನ್ಯ. ಉದಾಹರಣೆಗೆ ರಾಕ್ಷಸ ಸುಂದರಿಯ ಮಾತಿಗೆ ಕಿವಿಗೊಟ್ಟ ರಾಜನು ತನ್ನ ಐದು ಜನ ರಾಣಿಯರನ್ನು ಕಣ್ಣುಕೀಳಿಸಿ ಅಡವಿಗಟ್ಟುತ್ತಾರೆ. ಈ ರೀತಿಯ ಸಂಗತಿಗಳು ಅಸಂಖ್ಯವಾಗಿರುವುದರಿಂದ ಇಲ್ಲಿ ಎಲ್ಲವನ್ನೂ ಉದಾಹರಿಸುವ ಅವಶ್ಯಕತೆ ಇಲ್ಲವೆಂದು ತೋರುತ್ತದೆ. ರಾಣಿಯರು ಎಂತಹ ರಾಜನ ಹೆಂಡತಿಯರೆ ಆಗಿರಲಿ, ಕೆಲವರು ನಡೆತೆಯಲ್ಲಿ ಕೀಳುತನ ತೋರುತ್ತಾರೆ. ಒಂದು ಕಡೆ ರಾಜನ ಅಪ್ಪಣೆಯಂತೆ ರಾಣಿಯನ್ನು ಪರೀಕ್ಷಿಸಲು ಬಂದ

ಕುರುಡನ ಎದುರಿಗೆ, ರಾಣಿ ಬೆತ್ತಲೆಯಾಗುತ್ತಾಳೆ. ರಾಣಿಯರು ಒಮ್ಮೊಮ್ಮ ಅತಿ ಕಾಮುಕರಾಗಿ ತೋರುತ್ತಾರೆ. ತಮ್ಮ ಮಿಂಡಂದಿರನ್ನು ಕೂಡಲು ಊರ ಹೊರಗಿನ ಆಶ್ರಮ ಅಥವಾ ದನದ ಕೊಟ್ಟಿಗೆಗೆ ತಾವಾಗಿಯೇ ಹೋಗುತ್ತಾರೆ. ಒಂದು ವೇಳೆ ತಾವು ಹಾದರ ಮಾಡುವುದನ್ನು ಯಾರಾದರೂ ನೋಡಿದರೆ ಅವರಿಗೆ ಸಂಕಟಗಳನ್ನು ತಂದೊಡ್ಡುತ್ತಾರೆ. ಒಬ್ಬ ರಾಣಿ ಪ್ರಧಾನಿಯೊಂದಿಗೆ ಕೂಡಿ ಮಲಗಿದ್ದನ್ನು ನೋಡಿದವನ ತಲೆಗೆ ಮಾಟದ ಮುಳ್ಳು ಚುಚ್ಚಿ ನಾಯಿಯನ್ನಾಗಿಸುತ್ತಾಳೆ. ಒಬ್ಬಾಕೆ ರಾಣಿ ಕುದುರೆ ತಿಕ್ಕುವವನೊಂದಿಗೆ ಹಾದರಕ್ಕಿಳಿದು, ಕೊಟ್ಟಿಗೆಯಲ್ಲಿಯೇ ಅವನೊಂದಿಗೆ ಕೂಡುತ್ತಿರುತ್ತಾಳೆ. ಮತ್ತೊಬ್ಬಾಕೆ ಹಜಾಮನೊಂದಿಗೆ ಸ್ನೇಹ ಬೆಳೆಸಿರುತ್ತಾಳೆ. ಶಿಷ್ಟ ಸಾಹಿತ್ಯದಲ್ಲಿ ಕೇವಲ ಮೇಲ್ವರ್ಗದ ಗಂಡು ಕೆಳಜಾತಿಯ ಹೆಣ್ಣಿನೊಂದಿಗೆ ಸಂಬಂಧ ಬೆಳೆಸುವ ಚಿತ್ರಗಳಿದ್ದು, ಕೆಳಜಾತಿಯ ಗಂಡು ಮೇಲ್ವರ್ಗದ ಹೆಂಗಸಿನೊಂದಿಗೆ ಹಾದರಕ್ಕಿಳಿಯುವ ಸಂಗತಿ ಗಳಿಲ್ಲವೆಂಬ ಆಪಾದನೆಯಿದೆ. ಜನರು ಇಂದು ವಿಚಾರ ಮಾಡುತ್ತಿರುವುದನ್ನು ಜಾನಪದ ಎಂದೋ ಅರಿತಿದೆ ಎಂಬ ಅಂಶವನ್ನು ಈ ಮೇಲಿನ ಉದಾಹರಣೆಗಳ ಮೂಲಕ ಗಮನಿಸಬೇಕಾಗಿದೆ.

ಒಟ್ಟಿನಲ್ಲಿ ಜನಪದ ಕತೆಗಳು ನಿಶ್ಚಿತ ಆಶಯಗಳ ಚೌಕಟ್ಟಿನಲ್ಲಿ ರೂಪುಗೊಳ್ಳುತ್ತಿದ್ದರೂ ಅವುಗಳ ಸಾಂಸ್ಕೃತಿಕ ಪರಿಣಾಮ ವೈವಿಧ್ಯಪೂರ್ಣವಾಗಿದೆ. ತಾನು ಪ್ರಚಲಿತದಲ್ಲಿರುವ ಕಾಲ, ಪರಿಸರ, ಸಮಾಜದ ಪದ್ಧತಿ, ರೂಢಿ, ಆಚಾರ, ನಂಬುಗೆ, ಶ್ರದ್ಧೆ ಮುಂತಾದವುಗಳನ್ನು ಕನ್ನಡಿಸುತ್ತವೆ. ಜನಪದ ಜೀವನದ ಸಮಗ್ರ ನೋಟವನ್ನೇ ಧ್ವನಿಸುತ್ತವೆ. ಹೇಳುವವರಾಗಲಿ ಕೇಳುವವರಾಗಲಿ ಈ ಕಥೆಗಳ ಮೂಲಕ ತಮ್ಮ ಸುತ್ತಲಿರುವ ಸಾಮಾಜಿಕ ವಲಯದಲ್ಲೇ ಸುತ್ತುತ್ತಾರೆನ್ನಬೇಕು ರಾಜ ರಾಣಿಯರೆ ಇರಲಿ ಮಲತಾಯಿ, ಸೂಳೆಯರೆ ಇರಲಿ, ಇತರ ಗ್ರಾಮೀಣ ಆಯಗಾರ ಅಧಿಕಾರವರ್ಗವೇ ಇರಲಿ, ಎಲ್ಲರೂ ಗ್ರಾಮೀಣ ಜೀವನದ ಪ್ರತಿನಿಧಿಗಳೇ, ರೂಢಿ ಪದ್ಧತಿಗಳ ವಿಷಯದಲ್ಲೂ ಇದೇ ಮಾತನ್ನೇ ಹೇಳಬಹುದು. ಒಟ್ಟಿನಲ್ಲಿ ಜನಪದ ಕತೆ–ಸಂಸ್ಕೃತಿ ಚಿತ್ರಣದಲ್ಲಿ ಹೊಸತು ಅಥವಾ ಅಪರಿಚಿತ ಎಂಬ ಅಂಶದ ಅನ್ವೇಷಣೆ, ಚರ್ಚೆಗಿಳಿಯದ ಜೊತೆಗೆ ಪರಿಚಿತವಿದ್ದುದರ ಮೇಲೆಯೇ ಅವಧಾರಣೆ ಕೊಡುತ್ತದೆನ್ನಬೇಕು. ಪರಂಪರೆಯನ್ನು ಬಲವಾಗಿ ಆಶ್ರಯಿಸುವುದು ಜಾನಪದದ ಪ್ರಮುಖ ವೈಶಿಷ್ಟ್ಯ ಎಂದು ಜನಪದ ಕಥೆಗಳನ್ನು ಅಧ್ಯಯನ ಮಾಡುವುದರಿಂದ ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಗಂಗಾನಾಯಕ್ ಮತ್ತು ಗೌರೀಶ. (ಪ್ರ.ಸಂ) (2011). *ಜಾನಪದ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.
- ರಾಗೌ. (2012). *ಜಾನಪದ ಸಂಶೋಧನ.* ತನುಮನ ಪ್ರಕಾಶನ.
- ರಂಗರೆಡ್ಡಿ ಕೋಡಿರಾಂಪುರ. (2010). *ಜನಪದ ಸಂಸ್ಕೃತಿ.* ಕನ್ನಡ ಸಾಹಿತ್ಯ ಪರಿಷತ್.
- ವಿರಣ್ಣ ದಂಡೆ. (2003). *ಕಲ್ಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು.* ಸಿ.ವಿ.ಜಿ. ಪಬ್ಲಿಕೇಷನ್.
- ವಿರಣ್ಣ ದಂಡೆ. (2011). *ಆಯ್ದ ಜನಪದ ಕಥೆಗಳು.* ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿವಿ.